ಕರ್ನಾಟಕ ಸರಕಾರ

**ಸಹಾಯಕ ಆಯುಕ್ತರ ಕಛೇರಿ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ,**
**ಜಿಲ್ಲಾಧಿಕಾರಿಯವರ ಕಛೇರಿ ಆವರಣ, ದ.ಕ.ಮಂಗಳೂರು**
**ದೂರವಾಣಿ ಸಂಖ್ಯೆ: 2220576/ ಫ್ಯಾಕ್ಸ್: 0824-2220576/achrmng .2011 @Gmail.Com.**

**ನಡವಳಿ**

ವಿಷಯ:ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲೂಕು, ಶಂಭೂರು ಗ್ರಾಮದ, ಶ್ರೀ ಕಲ್ಲಮಳಿಗೆ ಇಷ್ಟದೇವತಾ ಮುಂಡಿತ್ತಾಯ ದೈವಸ್ಥಾನ- ಈ ದೈವಸ್ಥಾನಕ್ಕೆ(ಪ್ರವರ್ಗ 'ಸಿ') ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಕುರಿತು.

ಉಲ್ಲೇಖ: 1) ಈ ಕಛೇರಿಯ ಪ್ರಕಟಣೆ ಸಂಖ್ಯೆ:ಟಿಆರ್‌ಎಸ್.ಸಿಆರ್:116/2017-18 ದಿನಾಂಕ: 04.09.2017.

2) ದ.ಕ. ಜಿಲ್ಲಾ ಧಾರ್ಮಿಕ ಪರಿಷತ್ತಿನ ದಿನಾಂಕ. 30.08.2018 ರ ಸಭೆಯ ವಿಷಯಸೂಚಿ ಸಂಖ್ಯೆ (1) ರ ನಿರ್ಣಯ.

* * * *

**ಪ್ರಸ್ತಾವನೆ:-**

ದ.ಕ. ಜಿಲ್ಲೆ, ಬಂಟ್ವಾಳ ತಾಲೂಕು, ಶಂಭೂರು ಗ್ರಾಮದ ಶ್ರೀ ಕಲ್ಲಮಳಿಗೆ ಇಷ್ಟದೇವತಾ ಮುಂಡಿತ್ತಾಯ ದೈವಸ್ಥಾನವು (ಪ್ರವರ್ಗ 'ಸಿ') ಗೆ ಸೇರಿದ ಅಧಿಸೂಚಿತ ಸಂಸ್ಥೆಯಾಗಿರುತ್ತದೆ. ಸದ್ರಿ ಸಂಸ್ಥೆಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಬಗ್ಗೆ ಆಸಕ್ತ ಭಕ್ತಾದಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಹೊರಡಿಸಿದ ಉಲ್ಲೇಖ (1) ರ ಪ್ರಕಟಣೆಗೆ ಸ್ಪಂದಿಸಿ, ನಿಗದಿತ ಸಮಯದೊಳಗೆ ಸ್ವೀಕೃತವಾಗಿರುವ 14 ಅರ್ಜಿಗಳನ್ನು ಪೋಲೀಸ್ ಇಲಾಖೆ ಹಾಗೂ ತಹಶೀಲ್ದಾರ್‌ರ ಸತ್ಯಾಪನಾ ವರದಿಯೊಂದಿಗೆ ದಿನಾಂಕ: 30.08.2018 ರಂದು ನಡೆದ ಜಿಲ್ಲಾ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಮಂಡಿಸಿ ಅರ್ಜಿದಾರರ ಅರ್ಹತೆ, ಅನುಭವ ಪೂರ್ವಾಪರ ವಿವರಗಳನ್ನು ಪರಿಶೀಲಿಸಿ, ಮತ್ತು ಚರ್ಚಿಸಿ ದೇವಾಲಯದ ಸುವ್ಯವಸ್ಥಿತ ಆಡಳಿತದ ಹಿತದೃಷ್ಟಿಯಿಂದ ಈ ಕೆಳಕಂಡ ಮಹನೀಯರನ್ನು ವ್ಯವಸ್ಥಾಪನಾ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಿ ಉಲ್ಲೇಖ (2) ರ ನಿರ್ಣಯದಂತೆ ವ್ಯವಸ್ಥಾಪನಾ ಸಮಿತಿ ರಚಿಸಿ ಹೊರಡಿಸಿರುವ ಆದೇಶ.

**ಆದೇಶ ಸಂಖ್ಯೆ:ಟಿಆರ್‌ಎಸ್.ಸಿಆರ್.116/2017-18** **ದಿನಾಂಕ: 17.09.2018**

ಜಿಲ್ಲಾ ಧಾರ್ಮಿಕ ಪರಿಷತ್‌ನ ದಿನಾಂಕ: 30.08.2018 ರ ಸಭೆಯ ನಿರ್ಣಯದಂತೆ ದ.ಕ. ಜಿಲ್ಲೆ, ಬಂಟ್ವಾಳ ತಾಲೂಕು, ಶ್ರೀ ಕಲ್ಲಮಳಿಗೆ ಇಷ್ಟದೇವತಾ ಮುಂಡಿತ್ತಾಯ ದೈವಸ್ಥಾನ, ಇಲ್ಲಿಗೆ ಈ ಕೆಳಕಂಡ ಮಹನೀಯರು/ಮಹಿಳೆ ಯರನ್ನೊಳಗೊಂಡ ವ್ಯವಸ್ಥಾಪನಾ ಸಮಿತಿಯನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಕಾಯ್ದೆ 2011 ರ ವಿಧಿ 25 ರನ್ವಯ ಈ ಆದೇಶ ಹೊರಡಿಸಿದ ದಿನಾಂಕದಿಂದ 3 (ಮೂರು) ವರ್ಷಗಳ ಅವಧಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ರಚಿಸಿ ಆದೇಶ ಹೊರಡಿಸಿದೆ.

| ಕ್ರ.ಸಂ | ಪ್ರವರ್ಗ | | ವ್ಯವಸ್ಥಾಪನಾ ಸಮಿತಿ ಸದಸ್ಯರ ಹೆಸರು ಮತ್ತು ವಿಳಾಸ |
|---|---|---|---|
| 1 | 2 | | 3 |
| 1 | ಅರ್ಚಕ | 1 | ಅರ್ಚಕ/ಪ್ರಧಾನ ಅರ್ಚಕರು, ಶ್ರೀ ಕಲ್ಲಮಳಿಗೆ ಇಷ್ಟದೇವತಾ ಮುಂಡಿತ್ತಾಯ ದೈವಸ್ಥಾನ, ಶಂಭೂರು ಗ್ರಾಮ, ಬಂಟ್ವಾಳ ತಾಲೂಕು. |
| 2 | ಪ.ಜಾ/ ಪ.ಪಂ | 1 | ಶ್ರೀ ಪೂವಪ್ಪ ನಾಯ್ಕ್, ತಂ.ಹೆ: ಈಶ್ವರ ನಾಯ್ಕ್, ದರ್ಖಾಸ್ ಮನೆ, ಶಂಭೂರು ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು. 574231 -ಮೊನಂ: 8105245932 |
| 3 | ಮಹಿಳೆ | 1 | ಶ್ರೀಮತಿ ವೇದಾವತಿ ಎಸ್. ಅಮೀನ್,ಗಂ.ಹೆ: ಎಂ.ಸುರೇಂದ್ರ ಅಮೀನ್, 2-326, ಅಮೀನ್ ನಿವಾಸ್, ಬೋಳಂತೂರು ಮನೆ, ಮತ್ತು ಅಂಚೆ, ಬಂಟ್ವಾಳ ತಾಲೂಕು. 574222-ಮೊನಂ: 9483903935 |
| 4 | ಮಹಿಳೆ | 2 | ಶ್ರೀಮತಿ ಮೀನ ಭಗವಾನ್‌ದಾಸ್,ಗಂ.ಹೆ: ಭಗವಾನ್‌ದಾಸ್, ಜೆಪ್ಪು ಬಪ್ಪಾಲ್ 3 ನೇ ಕ್ರಾಸ್, ದಾದು ಪೂಜಾರಿ ಕಂಪೌಂಡ್, ಕಂಕನಾಡಿ, ಮಂಗಳೂರು ತಾಲೂಕು. 574231 -ಮೊನಂ: 9342177333 |
| 5 | ಸಾಮಾನ್ಯ | 1 | ಡಾ: ನವೀನ್ ಎನ್. ಬಪ್ಪಳಿಗೆ, ತಂ.ಹೆ: ನೀಲಪ್ಪ. ಬಿ, ಸ್ವರ್ಣ ಸುವಾಸಿನಿ, ಕೈಕುಂಜೆ ಪಶ್ಚಿಮ, ಬಿ.ಸಿ ರೋಡ್, ಬಂಟ್ವಾಳ ತಾಲೂಕು.ಮೊನಂ: 9844251900 |
| 6 | ಸಾಮಾನ್ಯ | 2 | ಶ್ರೀ ಚಂದ್ರಹಾಸ,ತಂ.ಹೆ: ಚೆನ್ನಪ್ಪ ಪೂಜಾರಿ, ದ್ವಾರಕ ನಿವಾಸ, ಶ್ರೀ ಕೃಷ್ಣನಗರ, ಬಡಕಬೈಲ್, ಕರಿಯಂಗಳ ಅಂಚೆ, ಬಂಟ್ವಾಳ ತಾಲೂಕು. ದ.ಕ.574219 -ಮೊನಂ: 9448622663 |
| 7 | ಸಾಮಾನ್ಯ | 3 | ಶ್ರೀ ಯಶೋಧರ, ತಂ.ಹೆ: ವೆಂಕಪ್ಪ ಸಪಲ್ಯ, ಕೊಲ್ಲೂರು ಮನೆ, ಶಂಭೂರು ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು. 57423 -ಮೊನಂ: 9480228066 |
| 8 | ಸಾಮಾನ್ಯ | 4 | ಶ್ರೀ ಹರೀಶ,ತಂ.ಹೆ: ರುಕ್ಕ ಪೂಜಾರಿ,1-90(2), ಕೇಪುಲಕೆರೆ ಮನೆ, ಪೆರಾಜೆ. ಬಂಟ್ವಾಳ ತಾಲೂಕು. 57453 - ಮೊನಂ: 9483363272 |
| 9 | ಸಾಮಾನ್ಯ | 5 | ಶ್ರೀ ಆನಂದ ಶೆಟ್ಟಿ,ತಂ.ಹೆ: ದಿ: ಕೊರಗ ಶೆಟ್ಟಿ, ಕಕ್ಕ ಮಜಲು ಮನೆ, ಶಂಭೂರು ಅಂಚೆ, ಬಂಟ್ವಾಳ ತಾಲೂಕು.ದ.ಕ. 574231 -ಮೊನಂ: 9945920064 |

ಆಡಳಿತಾಧಿಕಾರಿಯವರು /ಮೇಲ್ಕಂಡ ಸಮಿತಿ ಸದಸ್ಯರು ಒಂದು ವಾರದೊಳಗಾಗಿ ಮೇಲ್ಕಂಡ ಸದಸ್ಯರ ಸಭೆ ಜರುಗಿಸಿ, ಸಮಿತಿ ಸದಸ್ಯರುಗಳ ಪೈಕಿ ಅಧ್ಯಕ್ಷರನ್ನು ಆಯ್ಕೆ ಮಾಡಿ ಈ ಕಛೇರಿಗೆ ನಡವಳಿಯನ್ನು ಸಲ್ಲಿಸುವುದು.

## ಷರತ್ತುಗಳು

1. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಅಧಿನಿಯಮ 2011 ರ ಸೆಕ್ಷನ್ 25 (3) ಅನರ್ಹತೆಗಳೊಂದಿಗೆ ಹಾಗೂ ಕಾಯ್ದೆಯ (2ನೇ ತಿದ್ದುಪಡಿ) ಕಲಂ 25 (2) (ಡಿ) ಅನ್ವಯ ಯಾವುದೇ ಹಂತದಲ್ಲಿ ಯಾವುದೇ ರಾಜಕೀಯ ಪಕ್ಷದ ಪದಾಧಿಕಾರಿಯಾಗಿದ್ದಲ್ಲಿ ಅಂತಹವರ ಸದಸ್ಯತ್ವವು ಸಹಜವಾಗಿ ರದ್ದಾಗುವುದು.
2. ನೂತನವಾಗಿ ನೇಮಕಾತಿ ಹೊಂದಿದ ಎಲ್ಲಾ ಸದಸ್ಯರು ಇಲಾಖಾ ಕಾಯಿದೆ ಹಾಗೂ ನಿಬಂಧನೆಗಳಿಗೆ ಮತ್ತು ಅವುಗಳಿಗನುಗುಣವಾಗಿ ಇಲಾಖೆಯಿಂದ ಆಗಿಂದಾಗ್ಗೆ ನೀಡಲಾಗುವ ಆದೇಶ, ಸುತ್ತೋಲೆ, ನಿರ್ದೇಶನದಂತೆ ನಡೆದುಕೊಳ್ಳತಕ್ಕದ್ದು.
3. ದೈವಸ್ಥಾನಕ್ಕೆ ಸಂಬಂಧಿಸಿದ ಎಲ್ಲಾ ಲೆಕ್ಕಪತ್ರಗಳನ್ನು ನಿರ್ವಹಿಸಿ ಪ್ರತೀ ವರ್ಷ ಆಡಿಟ್ ಮಾಡಿಸಿ, ಆಡಿಟ್ ವರದಿಯಲ್ಲಿ ಕಾಣಿಸಿದ ಆಕ್ಷೇಪಣೆಗಳಿಗೆ ಉತ್ತರಿಸಿ, ಅವುಗಳಲ್ಲಿ ಕಂಡುಬರುವ ನ್ಯೂನ್ಯತೆಗಳನ್ನು ಸರಿಪಡಿಸುವಂತೆ ಹಾಗೂ ಲೆಕ್ಕಪತ್ರಗಳನ್ನು, ಆಡಿಟ್ ವರದಿಗಳನ್ನು ಕಾಯ್ದಿರಿಸುವ ಬಗ್ಗೆ ವ್ಯವಸ್ಥಾಪನಾ ಸಮಿತಿಯ ಎಲ್ಲಾ ಸದಸ್ಯರು ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.
4. ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಆರ್ಥಿಕ ದುರುಪಯೋಗ ಕಂಡು ಬಂದಲ್ಲಿ ನಿಯಮಾನುಸಾರ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು.
5. ಸದ್ರಿ ವ್ಯವಸ್ಥಾಪನಾ ಸಮಿತಿಯ ಅವಧಿಯು ಆದೇಶ ಹೊರಡಿಸಿದ ದಿನಾಂಕದಿಂದ ಮೂರು ವರ್ಷ ಅವಧಿಗೆ ಮಾತ್ರ ಇರುತ್ತದೆ.

ಜಿಲ್ಲಾ ಧಾರ್ಮಿಕ ಪರಿಷತ್ ನಿರ್ಣಯಾನುಸಾರ
ಹಾಗೂ ಅವರ ಪರವಾಗಿ,

ಸದಸ್ಯ ಕಾರ್ಯದರ್ಶಿ
ಜಿಲ್ಲಾ ಧಾರ್ಮಿಕ ಪರಿಷತ್ ಹಾಗೂ
ಸಹಾಯಕ ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು
ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ಹಾಗೂ
ದ.ಕ ಮಂಗಳೂರು.

ಪ್ರತಿ:-

1. ಸಂಬಂಧಿಸಿದ ಎಲ್ಲಾ ಸದಸ್ಯರುಗಳಿಗೆ
2. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಚಾಮರಾಜಪೇಟೆ, ಬೆಂಗಳೂರು – 560018.
3. ಉಪ ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಮಂಗಳೂರು.
4. ಅವಧಿ ಮುಗಿದ ಅಧ್ಯಕ್ಷರು/ಆಡಳಿತಾಧಿಕಾರಿ, ಶ್ರೀ ಕಲ್ಲಮಳಿಗೆ ಇಷ್ಟದೇವತಾ ಮುಂಡಿತ್ತಾಯ ದೈವಸ್ಥಾನ, ಶಂಭೂರು ಗ್ರಾಮ, ಬಂಟ್ವಾಳ ತಾಲೂಕು –ಇವರಿಗೆ ಸೂಕ್ತ ಕ್ರಮಕ್ಕಾಗಿ .
5. ಹೆಚ್ಚುವರಿ–2.